ಅಂತ. ಸಾವಿನ ಭಯ. ಸಾವಿನ ನೆರಳಲ್ಲಿ ಸತ್ತು ಬದುಕುತ್ತಿರುವವರ ಭಯ. ಸಿನಿಮಾ ಹೀರೋಗಳಂತೆ ಈ ಜನ ನಿರ್ಭಯ ವೀರರಲ್ಲ. 'ಯಾವ ಕ್ಷಣದಲ್ಲಾದರೂ ನಾನು ಸತ್ತುಹೋಗಬಹುದು', 'ಈ ಬಾಂಬ್ ಸ್ಫೋಟದಲ್ಲಿ ಸಾಯಬಹುದು', 'ನನ್ನ ಮನೆಯವರು, ಗೆಳೆಯರು, ಬಂಧುಗಳು ಈ ಕ್ಷಣದಲ್ಲಿ ಇಲ್ಲವಾಗಬಹುದು'. ಇಂತಹ ಆಲೋಚನೆಗಳ ನೆರಳಲ್ಲಿ ಸದಾ ಹೆದರಿಕೆಯಲ್ಲೇ ಬದುಕುವುದಿದೆಯಲ್ಲ ಅದು ಭಯಾನಕ. ನಾಲ್ಕು ವರ್ಷಗಳ ಸಾರಜೆವೋ–ಬೊಸ್ನಿಯಾ ಕಲಹದಲ್ಲಿ ಬದುಕುಳಿದ ಸಮಿಯ ಹೇಳುತ್ತಾಳೆ, 'ಅದು ನನ್ನಲ್ಲಿ ಹುಟ್ಟುವ 'ನಾನು' ಇಲ್ಲವಾಗಿಬಿಡೋ ಭಯ'. ಇರಾಕಿನಲ್ಲಿ ನನ್ನಮ್ಮ ಕೂಡ ಇದನ್ನೇ ಹೇಳ್ತಿದ್ದಳು. ಪ್ರತಿಕ್ಷಣ ಉಸಿರಿಗೊಮ್ಮೆ ಸತ್ತು ಹುಟ್ಟೋದು ಅಂತ. ಪ್ಯಾಲೆಸ್ತೇನಿಯನ್ ಮಹಿಳೆಯೊಬ್ಬಳು ಒಮ್ಮೆ ಹೇಳಿದಳು 'ಅದು ಬರೀ ಒಂದು ಸಾರಿ ಸಾಯೋ ಭಯವಲ್ಲ. ಒಂದೊಂದು ಸಾರಿ ದಿನಕ್ಕೆ ಹತ್ತು ಸಾರಿ ಈ ಕ್ಷಣ ನಾನು ಸಾಯ್ತೀನಿ ಅನ್ನಿಸುತ್ತೆ. ಸೈನಿಕರು ನಡೆದು ಹೋಗ್ತಿದ್ದರೆ, ಬಂದೂಕು, ಬುಲೆಟ್ಟುಗಳು ಹಾರುತ್ತಿದ್ದರೆ ಹೀಗೆ ಅನ್ನಿಸುತ್ತೆ. ಆದರೆ ಇದು ಸರಿಯಲ್ಲ. ನಮಗಿರೋದು ಒಂದೇ ಬದುಕು ಅಂದಮೇಲೆ ಸಾವು ಕೂಡ ಒಂದೇ ಇರಬೇಕು.'

ನಾವು ಯುದ್ಧದ ಒಂದು ಮುಖ ಮಾತ್ರ ನೋಡ್ತಾ ಅದರ ಬಗ್ಗೆ ಚರ್ಚೆ ಮಾಡ್ತಿವಿ. ಅದರ ರಾಜಕೀಯ, ಆಯುಧಗಳು, ಹಾನಿಗಳು ಇದರ ಕಡೆ ಮಾತ್ರ ಗಮನ ಕೊಡ್ತೀವಿ. ಅದರ ಬದಲು ಯುದ್ಧದ ಸೂಕ್ಷ್ಮಗಳನ್ನು ಕೆದಕುತ್ತಾ ಹೋದರೆ ಸಾಮಾಜಿಕವಾಗಿ ಎಲ್ಲಿ ಎಡವಿದ್ದೀವಿ ತಿಳಿಯುತ್ತೆ. ಭಯಾನಕ ಯುದ್ಧದ ನಂತರವೂ ಸಮುದಾಯದ ತಾಳುವ, ಪೊರೆಯುವ ಶಕ್ತಿ ಒಟ್ಟಾಗಿ ಮತ್ತೆ ಬದುಕಿನತ್ತ ಮುನ್ನಡೆದಿರುವುದು ಕಾಣುತ್ತೆ. ಇದು ಯುದ್ಧದ ನಿರರ್ಥಕತೆಯನ್ನು ಅರ್ಥಮಾಡಿಸುತ್ತೆ.

ಸಾವು ಮತ್ತು ಅತ್ಯಾಚಾರ ಯುದ್ಧದ ಅನಿವಾರ್ಯ ಫಲಗಳು ಅಂತ ಒಪ್ಪಿಕೊಂಡುಬಿಟ್ಟಿದ್ದೇವೆ. ಎಲ್ಲ ಯುದ್ಧಗಳಲ್ಲೂ ಶೇ. 75ರಷ್ಟು ಹಾನಿಯಾಗೊಳಗಾಗುವವರು ಮಹಿಳೆಯರು ಮತ್ತು ಮಕ್ಕಳೇ. ರವಾಂಡದಲ್ಲಿ 100 ದಿನಗಳಲ್ಲಿ ಅರ್ಧ ಮಿಲಿಯನ್ ಹೆಂಗಸರು ಅತ್ಯಾಚಾರಕ್ಕೊಳಗಾಗಿದ್ದಾರೆ!! ಕಾಂಗೋದಲ್ಲಿ ಇದು ನಡೆಯುತ್ತಲೇ ಇದೆ. ಯುದ್ಧ ಅಂದ ತಕ್ಷಣ ನಮ್ಮ ಗಮನ ಹಾರುವ ಕ್ಷಿಪಣಿಗಳು, ಸಿಡಿಯುವ ಮದ್ದುಗುಂಡುಗಳು, ಬಂದೂಕುಗಳ ಕಡೆ ಹೋಗುತ್ತದೆಯೇ ಹೊರತು ಈ ಕಡೆಗಲ್ಲ. ಇದೊಂದು ರೀತಿಯಲ್ಲಿ ಚದುರಂಗದಾಟವಾಗಿಬಿಟ್ಟಿದೆ. ಚತುರ ಆಟಗಾರ ಗೆಲ್ಲುತ್ತಲೇ ಸಾಗುತ್ತಾನೆ. ಸಾಯುವ ಕುದುರೆಯಾಳುಗಳು ಯಾರು ಅನ್ನೋದನ್ನ ಯಾರು ಗಮನಿಸುವುದಿಲ್ಲ.

ಯುದ್ಧದ ಮತ್ತೊಂದು ಭಾಗವಾದ ಮಹಿಳೆಯರ ಕಥನವನ್ನ ಗಮನಿಸುತ್ತಿಲ್ಲ. ನನ್ನಮ್ಮ ಪ್ರತಿಬಾರಿ ಸೈರನ್ ಸದ್ದು ಕೇಳಿದಾಗ, ಹಲ್ಲೆಗಳಾದಾಗ, ಕರೆಂಟು ಹೋದಾಗ ನೆರಳುಬೆಳಕಿನಲ್ಲಿ ನಂಗೆ ನನ್ನ ತಮ್ಮಂದಿರಿಗೆ ಬೊಂಬೆಯಾಟ ಆಡಿಸಿ ತೋರಿಸುತ್ತಿದ್ದಳು. ನಮ್ಮ ಗಮನ ಭಯಾನಕ ಸ್ಫೋಟಗಳತ್ತ ಹೋಗದಿರಲಿ ಅಂತ ಅವಳು ಕಂಡುಕೊಂಡಿದ್ದ ಉಪಾಯವದು. ಸರಜಾವೊ ಬೊಸ್ನಿಯಾ ಕಲಹದಲ್ಲಿ ಸಿಕ್ಕಿ ನರಳಿದ ಫರಿದಾ ಪಿಯಾನೋ ಹೇಳಿಕೊಡುತ್ತಿದ್ದ ಸಂಗೀತ ಶಿಕ್ಷಕಿ. ಆಕೆ ಯುದ್ಧದ ಸಮಯದಲ್ಲೂ ಪ್ರತಿದಿನ ಶಾಲೆಯ ಬಾಗಿಲು ತೆರೆಯುತ್ತಿದ್ದಳು. ಪ್ರತಿದಿನ ಪಿಯಾನೊ, ವಯೊಲಿನ್‌ಗಳ ತರಗತಿಗಳು ನಡೆಯುವಂತೆ ನೋಡಿಕೊಂಡಳು. ಆಕೆಯ ಶಾಲೆಯ ಮೇಲೆ, ಆಕೆಯ ಮೇಲೆ ಹಲ್ಲೆಗಳಾದರೂ ತನ್ನ ಕೆಲಸವನ್ನು ನಿಲ್ಲಿಸಲಿಲ್ಲ. ಮಕ್ಕಳು ಟೋಪಿ, ಕೊಟ್ಟು, ಗ್ಲೌಸುಗಳನ್ನು ತೊಟ್ಟು ತಪ್ಪದೆ ಶಾಲೆಗೆ ಬರುತ್ತಿದ್ದವು. ಇದು ಆಕೆ ಯುದ್ಧದ